ಅ) ಈ ವರ್ಷ ಜುಲೈ 91ರವರೆಗಿನ ಪ್ರಗತಿ

1) ಶಸ್ತ್ರ ಚಿಕಿತ್ಸೆ 83254

2) ವಂಕಿ 66772

3) ನಿರೋಧ್ ಉಪಯೋಗಿಸುವವರು 222685

4) ನುಂಗುವ ಗುಳಿಗೆ ಉಪಯೋಗಿಸುವವರು 72073

ಆ) ಜುಲೈ ಅಂತ್ಯದವರೆಗೆ

		ಗುರಿ	ಸಾಧನೆ	ಶೇಕಡ (ವರ್ಷದವರೆಗೆ)	ಶೇಕಡ ಜುಲೈಯವರೆಗೆ
1)	ಶಸ್ತ್ರ ಚಿಕಿತ್ಸೆ	34,5000	93254	27.0	104.0
2)	ವಂಕಿ	275000	66772	24.0	93.4
3)	ನಿರೋಧ್	270000	222685	82.5	92.8
4)	ನುಂಗುವ ಗುಳಿಗೆ	80000	72073	90.0	94.3

ಇ) -ಇಲ್ಲ-

ಅಂಗವಿಕಲರ ಸಮಗ್ರ ಸಮೀಕ್ಷೆ

2023 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಅಂಗವಿಕಲರ ಬಗ್ಗೆ ಒಂದು ಸಮಗ್ರ ಸಮೀಕ್ಷೆಯನ್ನು ನಡೆಸಿದೆಯೇ?

ಆ) ಅಂಗವಿಕಲರಿಗೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಎಷ್ಟು ಹುದ್ದೆಯನ್ನು ಮೀಸಲಿರಿಸಿದೆ?

ಇ) ಅಂಗವಿಕಲರಿಗೆ ನೀಡುವ ಮೀಸಲು ಪದ್ಧತಿ ಎಲ್ಲಾ ಇಲಾಖೆಗಳಿಗೂ ಅನ್ವಯಿಸುತ್ತದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಸಮೀಕ್ಷೆಯನ್ನು ನಡೆಸಲಾಗುತ್ತಿದೆ.

ಆ) ಸಿ ಮತ್ತು ಡಿ ಹುದ್ದೆಗಳಲ್ಲಿ ಪ್ರತಿಶತ 4ರಷ್ಟು ಮೀಸಲಿರಿಸಿದೆ.

ಇ) ಹೌದು.

ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ

2024 - ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಭಾರಿ ಮತ್ತು ಉದ್ಯಮ ಕೈಗಾರಿಕೆ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಲಾಗಿದೆಯೇ

ಆ) ಹಾಗಿದ್ದಲ್ಲಿ, ಹೊಸ ಕೈಗಾರಿಕೆಗಳ ನೀತಿಗಳು ಯಾವುವು?

ಶ್ರೀಮತಿ ಮನೋರಮಾ ಮಧ್ವರಾಜ್ (ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿ 1990ರಲ್ಲಿ ಹೊರಡಿಸಿದ ಕೈಗಾರಿಕಾ ನೀತಿಯ ಆದೇಶವನ್ನು ಹೊರತಾಗಿ, ಯಾವ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿಲ್ಲ.

ಆ) ಉದ್ಭವಿಸುವುದಿಲ್ಲ.